ಇದೇ ನಮೂನೆಯ ಮಾತನ್ನು ನೌಕರಿಗಾಗಿ ಕಾರವಾರದಲ್ಲೊಂದು ಸಂದರ್ಶನಕ್ಕೆ ಹೋದಾಗಲೂ ಹೇಳಿದ್ದರು. ತನಗೆ ಅಲ್ಲಿಯ ಎಂಎಲ್‌ಎ ಗುರುತು ಇರುವುದಾಗಿಯೂ, ಅವರು ನಾನು ಹೇಳಿದರೆ ಕರೆದು ಕೆಲಸ ಕೊಡುವುದಾಗಿ ಹೇಳಿದ್ದರು... ಆದರೆ ಆಗ, ರಪರಪ ಹೊಯ್ಯುವ ಮಳೆಯಂತೆ ಅವರ ಮಾತು ರೇಜಿಗೆ ಉಂಟುಮಾಡಿತ್ತು. ಯಾಕೆಂದರೆ ಆಗಲೇ ಆತ ತನ್ನ ಕರ್ಮಕಾಂಡದ ಮೂಲಕ ಹೇಸಿಗೆ ಹುಟ್ಟಿಸತೊಡಗಿದ್ದ. ಒಂದು ನಮೂನೆಯ ಹತಾಶ ಸ್ಥಿತಿ ತಲುಪಿದ್ದ...

ಇಲ್ಲ, ಅಲ್ಲಿ ಕೂತಿದ್ದ ಮಂದಿ ಏಳುವ ಹಾಗೆ ಕಾಣಲಿಲ್ಲ. ಮುಂದೇನು ಮಾಡಬೇಕೆಂದು ಗೊತ್ತಾಗದೆ ಅಲ್ಲೆ ಸುಮ್ಮನೆ ತುದಿಗಾಲಿನಲ್ಲಿ ಶಂಭು ಕುಳಿತೇ ಇದ್ದ . ನುಶಿ ಗಡ್ಡಾಗಿ ಕುಳಿತು ಕಚ್ಚುತ್ತಿತ್ತು. ಒಂದು ಸಣ್ಣ ಬೆಳಕಿನ ಕೋಲು ಬಾಗಿಲ ಸಂಧಿಯಿಂದ ಬಂದಿದ್ದು ಬಿಟ್ಟರೆ ಉಳಿದಂತೆ ಹೊರಗೆ ಘನಘೋರ ಕತ್ತಲೆ ಕಾಡು. ಆಗ ಈಗ ಪ್ರಾಣಿ ಪಕ್ಷಿಗಳ ಕೇಳಿಸುವ ಕೂಗು. ಕಾನಜಿರಲೆಯ ದಾಂಧಲೆ. ಕೊಟ್ಟಿಗೆಯಲ್ಲಿ, ದನ, ಎಮ್ಮೆ ಕೋಡು ಬಡಿಯುವ, ಬಾಲ ಆಡಿಸುವ ಸದ್ದು...

ಅದೇ ಹೊತ್ತಲ್ಲಿ ಶಂಭುವಿನ ಅಣ್ಣ ಶಾಂತಾರಾಮ, 'ನಾನು ಸಾಯುತ್ತೇನೆ, ನನ್ನಿಂದ ನೀನು ಮನೆ ಬಿಟ್ಟು ಹೋಗುವುದಾದರೆ ನಾನು ಯಾಕೆ ಇರಬೇಕು' ಎನ್ನುತ್ತ ಶೆಡ್ಡಿನ ಕೆರೆಯ ಬದಿಗೆ ಓಡಿದ. ಕಮಲಮ್ಮನ ಅಳು ಜೋರಾಯಿತು. ಅವನಿಗೆ ಏನು ಮಾಡಬೇಕೆಂದು ಅಂತಪಾರು ಹರಿಯಲಿಲ್ಲ. ಅಣ್ಣನ ಹಿಂದೆ ಶಂಭುವೂ ಓಡಿದ.

ಕೆರೆ ಹತ್ತಿರ ಹೋಗಿ ನೋಡಿದರೆ, ಶಾಂತಾರಾಮ ಕೆರೆ ಕಟ್ಟೆಯ ಮೇಲೆ ಮೊಳಕಾಲಿನೊಳಗೆ ಮುಖ ಹುಗಿದು ಅಳುತ್ತಿದ್ದ! ಅಣ್ಣನನ್ನು ಶಂಭು ಪುಸಲಾಯಿಸಿ ಮನೆಗೆ ಕರೆತಂದ.

ಶಾಂತಾರಾಮ ಓಡಿದ್ದರಿಂದ ಒಂದು ಲಾಭವಾಗಿತ್ತು! ಹೆಗಡೆಯವರು ಮನೆಯೊಳಗೆ ಬಂದಿದ್ದರು. ಆದರೆ ಸುಮ್ಮನೆ ಹಾಸಿಗೆಗೆ ಹೋಗಿ ಮಲಗಿದರು. ಅವರಿಗೆ ಹೇಗಾದರೂ ಮಾಡಿ ಊಟ ಮಾಡಿಸಬೇಕಾಗಿತ್ತು. ಕಮಲಮ್ಮ ಇನ್ನೂ ಊಟ ಮಾಡಿರಲಿಲ್ಲ. ಅಪ್ಪನಿಗೆ ಏನೇನೊ ಹೇಳಿ ಶಂಭು ಊಟಕ್ಕೆ ಕೂಡ್ರಿಸಿದ. 'ನಾನೆ ಸೋತೆ ಮಾರಾಯಾ, ನಿಂಗೊ ಹೇಳಿದ ಹಾಗೆ ಕೇಳ್ತೆ' ಎಂದು ವ್ಯಂಗ್ಯದಿಂದಲೊ ಹತಾಶೆಯಿಂದಲೊ ಹೇಳುತ್ತ ಊಟ ಮಾಡಿದ ಶಾಸ್ತ್ರ ಮಾಡಿದರು.

ಅಂಗಳದಲ್ಲಿ ಮುಖ ಕೆಳಗೆ ಹಾಕಿ ಕುಳಿತ ಅಣ್ಣ ಅಷ್ಟಷ್ಟಾಗಿ ಒಳಗೆ ಬಂದ.

ಘೋರಾಕಾರ ಮೌನದಲ್ಲಿ ಮನೆ ಮುಳುಗಿತ್ತು. ಶಂಭು ಬಾಗಿಲು ಹಾಕಿ ಲೈಟ್ ತಗೆದ. ಕತ್ತಲೆ ನೋಡುತ್ತ ಮಲಗಿದ. ಚಿಕ್ಕವನಿರುವಾಗ ಅಂಗಳದ ತುದಿಗೆ ಹೋಗಿ ಉಚ್ಚೆ ಹೊಯ್ಯಲೂ ಅಕ್ಕ, ಆಯಿಯನ್ನು ಕರೆದೊಯ್ಯುತ್ತಿದ್ದ ಅವನಿಗೆ ಈಗ ಹೆದರಿಕೆಯಾಗಲಿಲ್ಲ. ಎಲ್ಲರನ್ನೂ ಒಂದು ನಮೂನೆ ಸಮಾಧಾನ ಮಾಡಿದೆ ಎನಿಸಿತು. ತಣ್ಣನೆ ಗಾಳಿ ಸಣ್ಣದಾಗಿ ಬೀಸುತ್ತಿತ್ತು.

## 2

ಆ ಘಟನೆ ಆದಮೇಲೆ ನದಿಗೆ ನೆಗಸು ಬಂದು ಇಳಿದಂತಿತ್ತು ಮನೆ. ಆರ್ಥಿಕವಾಗಿ ನಿಧಾನವಾಗಿ ಸುಧಾರಿಸತೊಡಗಿತ್ತು. ಸಂಬಂಧಗಳು ಮಾತ್ರ ಸುಡಮಣ್ಣು ಗುಡ್ಡೆಯಂತಿತ್ತು. ಒಮ್ಮೇಲೆ ಏನಾದರೂ ಭಯಂಕರವಾದದ್ದು ನಡೆದರೆ ಹೊಸ ಬದುಕು ತಟಕ್ಕನೆ ಹಾಸಿಕೊಳ್ಳುತ್ತಿತ್ತೊ ಏನೊ. ಅಂಥದ್ದೇನು ಸಂಭವಿಸಲಿಲ್ಲ. ತಣ್ಣಗೆ ಹರಿವ ಶರಾವತಿಯಂತೆ ಸಾಗಿತ್ತು.

ಹೆಗಡೆಯವರು ಬೆಳಿಗ್ಗೆಯಿಂದ ಸಂಜೆಯವರೆಗೆ ಅವಿರತವಾಗಿ ಕೆಲಸ ಮಾಡುತ್ತಿದ್ದರು. ಉಳಿದ